Teachingninja.in

Latest Govt Job updates

Private Job updates

Free Mock tests available

Visit - teachingninja.in

# KHC
# Civil Judge

## Previous Year Paper
### Mains (Translation) 07 Oct, 2022

Teachingninja.in

# HIGH COURT OF KARNATAKA

## ಕರ್ನಾಟಕ ಉಚ್ಚ ನ್ಯಾಯಾಲಯ

## CIVIL JUDGE MAIN WRITTEN EXAMINATION 2022

## ಸಿವಿಲ್ ನ್ಯಾಯಾಧೀಶರ ಮುಖ್ಯ ಲಿಖಿತ ಪರೀಕ್ಷೆ 2022

## TRANSLATION PAPER

## ಭಾಷಾಂತರ ಪತ್ರಿಕೆ

Date: 07.10.2022
ದಿನಾಂಕ: 07.10.2022

Max Marks: 100
ಗರಿಷ್ಠ ಅಂಕಗಳು: 100

Time: 10.00 AM to 1.00 PM
ಸಮಯ: ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ

**Instructions:**
**ಸೂಚನೆಗಳು:**

Write your register number only on the cover page in the space provided in the answer book and nowhere else. You shall not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.

ನಿಮ್ಮ ರಿಜಿಸ್ಟರ್ ನಂಬರನ್ನು ಉತ್ತರ ಪತ್ರಿಕೆಯ ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

1. **Translate the following deposition to Kannada language :**

ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಕನ್ನಡ ಭಾಷೆಗೆ ಅನುವಾದಿಸಿ:

**Marks: 15**
ಅಂಕಗಳು: 15

**Cross-examination by the Counsel for defendant No.2:**

I have produced the genealogical tree of our family. Chikkanarasimhaiah is the elder brother of my father. It is true to suggest that my father and said Chikkanarasimhaiah have jointly purchased the land bearing Sy.No.70. Witness voluntarily

Teachingninja.in

said that at the time of purchase, said land was bearing Sy.No.22/3 and 22/4. I have not produced any revenue records relating to old Sy.No.22/3 and 22/4. I say that after purchase there was change of katha in the name of my father and his elder brother. I have not produced said katha before this Court.

It is true to suggest that elder brother of my father has filed Land Acquisition Case to claim compensation from the Bangalore Development Authority by asserting that he is the owner of the said land. It may be true that the Court ordered to pay the compensation only on proving the title and ownership of the said land. When a plan is shown to the witness and suggested that it was the plan prepared for acquisition of the said land, witness admitted the same and accordingly said plan is marked as Ex.D.1. It is false to suggest that Bangalore Development Authority has issued notice for acquiring entire 3 acres of land in Sy.No.70. When Ex.P.21 to P.28 photos are shown to the witness and suggested that no buildings were appearing in those photos, witness said that building constructed by them was demolished by the Bangalore Development Authority. We have not filed any Injunction suit to restrain the Bangalore Development Authority from demolishing the building constructed by us. There was no hurdle for us to file any such suit. The legal heirs of my uncle have not challenged the acquisition proceedings and they have accepted the compensation awarded to them. It is false to suggest that we have lost right and title over the suit property. It is false to suggest that the suit property is legally vested with the defendants. It is false to suggest that we have filed this false suit to make unlawful gain.



Teachingninja.in

**2. Translate the following Passage as extracted from a Judgment to Kannada language:** **Marks: 15**

ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ. **ಅಂಕಗಳು: 15**

Learned Special Public Prosecutor, by drawing the attention of this Court to Section 29 of the Protection of Children from Sexual Offences Act, 2012 (In short, POCSO Act), submitted that said provision provides for drawing the presumption regarding commission of offence by the accused. According to the Special Public Prosecutor, in view of the said presumption, this Court shall presume that the accused has committed the alleged offence and burden will be upon the accused to disprove the prosecution case.

No doubt, Section 29 of the POCSO Act provides for drawing the presumption in favour of the prosecution. Drawing of such a presumption by this Court is mandatory because of employment of the word "shall" in said provision. But, this Court can not straight away draw the presumption regarding the guilt of the accused merely because charge sheet is filed against him. As per the Criminal Jurisprudence, it is the prosecution, which has to lead evidence to bring home the guilt of the accused. It is only after prosecution discharges the initial burden and prima facie proves the guilt of the accused, presumption can be drawn, so as to make the accused to rebut and displace the presumption. This view of mine is based upon a Full Bench decision of the Hon'ble High Court of Karnataka reported in ILR 1993 KARNATAKA 3035 (Harikumar vs State of Karnataka). As per the ratio laid down in the above decision, without discharging the initial burden by the prosecution, straight away drawing the presumption in favour of the prosecution and asking the accused to prove his innocence will



Teachingninja.in

be highly arbitrary and unreasonable and it is also against the Article 14 and 20(3) of the Constitution of India.

**3. Translate the following document to Kannada language** **Marks: 20**

ಈ ಕೆಳಕಂಡ ದಸ್ತಾವೇಜನ್ನು ಕನ್ನಡ ಭಾಷೆಗೆ ಅನುವಾದಿಸಿ: ಅಂಕಗಳು: 20

## WILL

I, Smt.Kusuma, Aged about 62 years, W/o Sri Anjaneya Reddy, Resident of Mulabagilu, Kolar District, do hereby execute this WILL on this the 24th day of December 2018:

WHEREAS, I married Sri Anjaneya Reddy on 12.07.1978 at Guntur, Andhrapradesh and from the said wedlock, I have a son by name Ramakrishna and a daughter by name Anjali. I have been leading life happily with my husband at Mulabagilu. My son Ramakrishna is an Advocate by profession and residing in Bangalore with his wife Rekha and a son by name Chandan. We have performed the marriage of our daughter Anjali with Ranganath, who is doctor by profession and they are well settled in life and staying happily at Hindupura. My son and daughter are no more dependent on me.

WHEREAS, I worked as a teacher in Government Primary school and retired during the year 2016. From my own earning, I have purchased the property, which is more fully described in the schedule hereunder from its erstwhile owner, Smt. Lashmidevamma for valuable consideration, under a registered sale deed dated 24.05.2008. Subsequent to the purchase, katha of the schedule property mutated in my name and I have constructed a multi storied residential house and in peaceful and enjoyment of the schedule property as its absolute owner.



Teachingninja.in

WHEREAS, life is transient and nobody is certain of their life. In order to execute my wishes and transfer my property as per my desire; I decided to execute a will to bequeath the schedule property in favour of my only grand son Chandan.

WHEREAS, I am in sound disposing state of mind and executing this Will out of my free will, without any compulsion or coercion or undue influence from anybody. Therefore, after my death, my grand son Chandan shall succeed to the schedule property as its absolute owner and entitle to get the katha changed in his name and enjoy the schedule property absolutely and exclusively, without any interference or obstruction from whomsoever.

I hereby declare that this is my last Will and if there be any other Will or testamentary writing made by me, I hereby revoke and cancel the same.

This Will shall come into effect after my death.

**SCHEDULE**

A site measuring 40 X 80 feets, bearing katha No.488/2, with a multi storied residential house, situated at Sai Layout, Mulabagilu Town.

Above property with all the appurtenances attached thereunto

IN WITNESSES WHEREOF, I have signed this Will in the presence of attesting witnesses hereunder on this 24th day of December 2018 at Mulabagilu.

**Smt. Kusuma Anjaneya Reddy**

**WITNESSES:**

**1.**

**2.**



Teachingninja.in

## 4. Translate the following deposition to English language :

**Marks:15**

ಈ ಕೆಳಕಂಡ ಸಾಕ್ಷಿ ಹೇಳಿಕೆಯನ್ನು ಆಂಗ್ಲ ಭಾಷೆಗೆ ಅನುವಾದಿಸಿ. ಅಂಕಗಳು: 15

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕ 08.08.2018ರಿಂದ 09.07.2020ರವರೆಗೆ ಮೈಸೂರಿನ ಕುವೆಂಪು ನಗರ ಠಾಣೆಯ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು. ಮೇಲಿನ ಅವಧಿಯ ನಡುವೆ ನಾನು ದಿನಾಂಕ 02.02.2019ರಿಂದ 18.03.2019ರವರೆಗೆ ಮೈಸೂರು ಭೋಗಾದಿ ಠಾಣೆಯ ವೃತ್ತ ನಿರೀಕ್ಷಕನ ಹೆಚ್ಚುವರಿ ಪ್ರಭಾರದಲ್ಲಿ ಇದ್ದೆನು.

ದಿನಾಂಕ 25.02.2019ರಂದು ಸಂಜೆ 4.30 ಘಂಟೆಗೆ ಈ ಪ್ರಕರಣದ ಫಿರ್ಯಾದಿಯು ಠಾಣೆಗೆ ಹಾಜರಾಗಿ ಆರೋಪಿತರು ಆತನೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಕತ್ತಿಯಿಂದ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿ ಆತನಿಗೆ ಕೊಲೆ ಬೆದರಿಕೆ ಹಾಕಿರುವ ಬಗ್ಗೆ ನಿಶಾನೆ ಪಿ.1 ರಂತೆ ಕೊಟ್ಟಂತಹ ಒಂದು ಲಿಖಿತ ಫಿರ್ಯಾದಿಯನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ನಾನು ಭೋಗಾದಿ ಠಾಣೆಯ ಪ್ರಕರಣ ಸಂಖ್ಯೆ 42/2019ರಲ್ಲಿ ಒಂದು ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು.

ಬಳಿಕ ನಾಪತ್ತೆಯಾಗಿರುವ ಆರೋಪಿತರನ್ನು ಪತ್ತೆ ಹಚ್ಚಲು ನಮ್ಮ ಠಾಣಾ ಸಿಬ್ಬಂದಿಗಳಾದ ಚಾಸಾ.13 ರಿಂದ 15 ಇವರನ್ನು ನೇಮಕ ಮಾಡಿ ಈ ಬಗ್ಗೆ ಮೈಸೂರು ಜಿಲ್ಲೆಯ ಎಲ್ಲಾ ಪೋಲಿಸ್ ಠಾಣೆಗಳಿಗೆ ನಿಸ್ತಂತು ಸಂದೇಶವನ್ನು ಕಳುಹಿಸಿಕೊಟ್ಟೆನು. ದಿನಾಂಕ 26.02.2019ರಂದು ಬೆಳಗ್ಗೆ 11.30 ಘಂಟೆಗೆ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಫಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ನಿಶಾನೆ ಪಿ.2 ರಂತೆ ಮಹಜರು ಕ್ರಮವನ್ನು ಜರುಗಿಸಿ ಕೃತ್ಯಕ್ಕೆ ಸಂಬಂಧ ಪಟ್ಟಂತ ಕತ್ತಿ ಮತ್ತು ಫಿರ್ಯಾದಿಯ ರಕ್ತದ ಕಲೆಯುಳ್ಳ ಬಟ್ಟೆ ಮತ್ತು ರಕ್ತಸಿಕ್ತ ಮಣ್ಣನ್ನು ಸ್ಥಳದಿಂದ ಅಮಾನತ್ತು ಪಡಿಸಿಕೊಂಡೆನು. ಅವುಗಳನ್ನು ನಾನು ಗುರುತಿಸುತ್ತಿದ್ದು ಅವುಗಳನ್ನು ಕ್ರಮವಾಗಿ ಮುದ್ದೆಮಾಲು 1 ರಿಂದ 3 ಎಂದು ಗುರುತಿಸಲಾಗಿದೆ. ಬಳಿಕ ನಾನು ಚಾಸಾ.3 ರಿಂದ 5 ಇವರ ಹೇಳಿಕೆಯನ್ನು ಮತ್ತು ಚಾಸಾ.1 ಇವರ ಮರು ಹೇಳಿಕೆಯನ್ನು ಪಡೆದುಕೊಂಡೆನು. ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿಕೊಂಡು ಅವುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಿಕೊಡಲು ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು.



Teachingninja.in

5. **Translate the following passage as extracted from a judgment to English language:** **Marks :15**

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:** **ಅಂಕಗಳು: 15**

**ವಿವಾದಾಂಶ ನಂ.5 ಮತ್ತು ಹೆಚ್ಚುವರಿ ವಿವಾದಾಂಶ:**

ಈ ವಿವಾದಾಂಶಗಳು ಈ ದಾವಾ ಕಾಲಮಿತಿ ಭಾದೆಗೆ ಒಳ್ಳಪಟ್ಟಿದೆ ಮತ್ತು ಪ್ರತಿಕೂಲ ಸ್ವಾಧೀನದ ಮೂಲಕ ಪ್ರತಿವಾದಿಯು ದಾವಾ ಆಸ್ತಿಯ ಮೇಲೆ ಮಾಲೀಕತ್ವವನ್ನು ಗಳಿಸಿರುವುದಕ್ಕೆ ಸಂಬಂಧಿಸಿದ್ದಾಗಿದೆ. ಪ್ರತಿವಾದಿ ಪರ ಮಾನ್ಯ ವಕೀಲರು ವಾದಿಯು ಈ ದಾವಾದಲ್ಲಿ ಮುಖ್ಯ ಪರಿಹಾರವಾಗಿ ಘೋಷಣೆಯನ್ನು ಕೇಳಿರುವುದರಿಂದ ಕಾಲಮಿತಿ ಅಧಿನಿಯಮ, 1963ರ ಅನುಚ್ಛೇಧ 58 ಅನ್ವಯವಾಗುತ್ತಿದ್ದು ಆ ಪ್ರಕಾರ ಈ ದಾವಾ ಸಲ್ಲಿಸಲು ಇರುವ ಕಾಲಮಿತಿ 3 ವರ್ಷ ಎಂದು ವಾದಿಸುತ್ತಾರೆ. ನಾನು ಪ್ರತಿವಾದಿ ಪರ ಮಾನ್ಯ ವಕೀಲರ ಈ ವಾದವನ್ನು ಒಪ್ಪುವುದಿಲ್ಲ. ಯಾಕೆಂದರೆ ವಾದಿಯು ಈ ದಾವಾದಲ್ಲಿ ಘೋಷಣೆಯ ಪರಿಹಾರದ ಜೊತೆಗೆ ದಾವಾ ಆಸ್ತಿಯ ಸ್ವಾಧೀನವನ್ನು ಕೂಡ ಕೇಳಿರುತ್ತಾರೆ. ಒಂದು ದಾವಾದಲ್ಲಿ ಘೋಷಣೆ ಮತ್ತು ಸ್ವಾಧೀನದ ಪರಿಹಾರವನ್ನು ಕೇಳಿದಾಗ ಆ ದಾವಾಕ್ಕೆ ಕಾಲಮಿತಿ ಅಧಿನಿಯಮ 1963ರ ಅನುಚ್ಛೇಧ 65 ಅನ್ವಯವಾಗುತ್ತಿದ್ದು ಆ ಪ್ರಕಾರ ಆ ದಾವೆಗೆ ಕಾಲಮಿತಿ 12 ವರ್ಷಗಳಾಗಿರುತ್ತದೆ. ಈ ನನ್ನ ಅಭಿಪ್ರಾಯವು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಎ.ಐ.ಆರ್. 1991 ಕರ್ನಾಟಕ 273ರಲ್ಲಿ ವರದಿಯಾದ ತೀರ್ಪಿನ ಆಧಾರದ ಪ್ರಕಾರವಾಗಿದೆ. ಆ ತೀರ್ಪಿನಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು "ವಾದಿಯು ತನ್ನ ಮಾಲೀಕತ್ವವನ್ನು ಘೋಷಿಸಬೇಕು ಎಂದು ಪರಿಹಾರ ಕೋರಿ ಅದರೊಂದಿಗೆ ಆಸ್ತಿಯ ಸ್ವಾಧೀನವನ್ನು ಕೊಡಬೇಕು ಎಂದು ಕೇಳಿದಲ್ಲಿ ಆ ದಾವೆಗೆ ಕಾಲಮಿತಿ ಅಧಿನಿಯಮ 1963ರ ಅನುಚ್ಛೇಧ 65 ಅನ್ವಯವಾಗುತ್ತದೆ ಮತ್ತು ಅನುಚ್ಛೇಧ 58 ಅಲ್ಲ" ಎಂದು ಅಭಿಪ್ರಾಯ ಪಟ್ಟಿರುತ್ತದೆ. ಆ ಕಾರಣದಿಂದ ಈ ದಾವೆಯು ಕಾಲಮಿತಿ ಬಾದೆಗೆ ಒಳಪಟ್ಟಿದೆ ಎನ್ನುವ ಪ್ರತಿವಾದಿಯರ ವಾದವನ್ನು ಒಪ್ಪಲಾಗುವುದಿಲ್ಲ.

ಯಾವುದೇ ಪ್ರತಿಕೂಲತನ ಇಲ್ಲದೇ ಕೇವಲ ನಿರಂತರ ಸ್ವಾಧೀನ ಎಷ್ಟೇ ದೀರ್ಘಾವಧಿಯವರೆಗೆ ಇದ್ದರೂ ಕೂಡ ಅದು ಪ್ರತಿಕೂಲ ಸ್ವಾಧೀನದ ಪ್ರಕಾರ ಮಾಲೀಕತ್ವ ಗಳಿಸಲು ಆಗುವುದಿಲ್ಲ ಎಂಬುದು ಸ್ಪಷ್ಟವಾಗಿ ಸ್ಥಾಪಿಸಲ್ಪಟ್ಟ ಕಾನೂನಿನ ಪ್ರತಿಪಾದನೆಯಾಗಿದೆ. ಬೇರೆಯರ ಮಾಲೀಕತ್ವಕ್ಕೆ ಸೇರಿದ ಆಸ್ತಿಯ ಮೇಲೆ ಪ್ರತಿಕೂಲ ಸ್ವಾಧೀನದ ಮೂಲಕ ಮಾಲೀಕತ್ವವನ್ನು ಗಳಿಸಲು ಮುಖ್ಯವಾಗಿ ಯಾರ ಮಾಲೀಕತ್ವಕ್ಕೆ ಆ ಆಸ್ತಿ ಸೇರಿದೆಯೊ ಅವರ ಮಾಲೀಕತ್ವವನ್ನು ಪ್ರತಿವಾದಿಯು ಒಪ್ಪಿಕ್ಕೊಳ್ಳಬೇಕಾಗುತ್ತದೆ. ನಿಜವಾದ ಮಾಲೀಕನ ಮಾಲೀಕತ್ವವನ್ನು ಒಪ್ಪಿಕೊಳ್ಳದೆ ಪ್ರತಿವಾದಿಯು



Teachingninja.in

ಆತನ ವಿರುದ್ಧ ಪ್ರತಿಕೂಲ ಸ್ವಾಧೀನದ ಮೂಲಕ ಮಾಲೀಕತ್ವವನ್ನು ಗಳಿಸಿಕೊಂಡಿದ್ದೇನೆ ಎಂದು ಸಾಧಿಸುವುದು ಕಾನೂನಿಗೆ ತಿಳಿಯದ ವಿಷಯವಾಗಿರುತ್ತದೆ. ಆ ಕಾರಣದಿಂದ ಯಾವಾಗ ಪ್ರತಿವಾದಿಯು ಪ್ರತಿಕೂಲ ಸ್ವಾಧೀನದ ಪ್ರಕಾರ ತಾನು ಆಸ್ತಿಗೆ ಮಾಲೀಕತ್ವ ಗಳಿಸಿದ್ದೇನೆ ಎಂದು ಸಾಧಿಸುತ್ತಾನೊ ಆಗ ಪ್ರತಿವಾದಿಯು ಆ ಆಸ್ತಿಯ ಮಾಲೀಕ ವಾದಿಯು ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

**6. Translate the following document to English language:**

**Marks: 20**

ಈ ಕೆಳಕಂಡ ದಸ್ತಾವೇಜನ್ನು ಆಂಗ್ಲ ಭಾಷೆಗೆ ಅನುವಾದಿಸಿ: ಅಂಕಗಳು: 20

**ಹಕ್ಕು ಖುಲಾಸೆ ಪತ್ರ**

ದಿನಾಂಕ 15.06.2019ರಂದು ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ನಾವುಂದ ಗ್ರಾಮದ ಜೋಡುಕಟ್ಟೆ ಎಂಬಲ್ಲಿ ವಾಸವಾಗಿರುವ ದಿವಂಗತ ಲಾರೆನ್ಸ್ ಡಿಸೋಜರವರ ಪತ್ನಿ ಸುಮಾರು 75 ವರ್ಷ ಪ್ರಾಯದ ಕ್ರಿಸ್ತಿನ್ ಡಿಸೋಜ ಮತ್ತು ಉಡುಪಿ ಜಿಲ್ಲೆ ಪೇತ್ರಿಯಲ್ಲಿ ವಾಸವಾಗಿರುವ ದಿವಂಗತ ಲಾರೆನ್ಸ್ ಡಿಸೋಜರವರ ಮಗಳು ಮತ್ತು ಜಾರ್ಜ ಪಿಂಟೋರವರ ಪತ್ನಿ ಸುಮಾರು 40 ವರ್ಷ ಪ್ರಾಯದ ಹೆಲೆನ್ ಪಿಂಟೋ (ಇನ್ನು ಮುಂದೆ ಹಕ್ಕು ಖುಲಾಸೆ ಮಾಡುವವರು ಎಂದು ಕರೆಯಲ್ಪಡುವವರು) ಆದ ನಾವುಗಳು:

ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ನಾವುಂದ ಗ್ರಾಮದ ಜೋಡುಕಟ್ಟೆ ಎಂಬಲ್ಲಿ ವಾಸವಾಗಿರುವ ದಿವಂಗತ ಲಾರೆನ್ಸ್ ಡಿಸೋಜರವರ ಮಗ ಸುಮಾರು 48 ವರ್ಷ ಪ್ರಾಯದ ಜೆರಾಲ್ಡ್ ಡಿಸೋಜ (ಇನ್ನು ಮುಂದೆ ಹಕ್ಕು ಪಡೆಯುವವರು ಎಂದು ಕರೆಯಲ್ಪಡುವವರು) ಆದ ನಿನಗೆ ಬರೆದುಕೊಟ್ಟ ಕೃಷಿ ಸ್ಥಿರಾಸ್ತಿಯ ಅವಿಭಕ್ತ ಹಕ್ಕಿನ ಹಕ್ಕು ಖುಲಾಸೆ ಪತ್ರ.

ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿದ ಸ್ಥಿರಾಸ್ತಿಯ ಮೂಲತಃ 1ನೇ ಹಕ್ಕು ಖುಲಾಸೆ ಮಾಡುವವರ ಗಂಡ ಮತ್ತು 2ನೇ ಹಕ್ಕು ಖುಲಾಸೆ ಮಾಡುವವರ ಮತ್ತು ಹಕ್ಕು ಪಡೆಯುವವರ ತಂದೆ ಲಾರೆನ್ಸ್ ಡಿ ಸೋಜರವರಿಗೆ ಕುಂದಾಪುರ ಭೂನ್ಯಾಯ ಮಂಡಳಿಯ ಪ್ರಕರಣ ಸಂಖ್ಯೆ ಟಿ.ಆರ್.ಎಲ್.678/1986–87ರಲ್ಲಿ ಅನುಭೋಗದಾರನೆಂದು ತೀರ್ಮಾನಿಸಿ ಮಂಜೂರಾಗಿದ್ದು ಅದರಂತೆ ಕುಂದಾಪುರ ಭೂ ಸುಧಾರಣಾ ವಿಶೇಷ ತಹಶೀಲ್ದಾರರು ದಿನಾಂಕ 26.02.1989ರಂದು ಫಾರಂ ನಂ.10ರಲ್ಲಿ ಪ್ರಮಾಣ ಪತ್ರವನ್ನು ನೀಡಿದ ಆಸ್ತಿಯಾಗಿದ್ದು ಆ ಪ್ರಕಾರ ಸದ್ರಿ ಲಾರೆನ್ಸ್ ಡಿಸೋಜರವರು ಷೆಡ್ಯೂಲ್ ಆಸ್ತಿಯನ್ನು ಸಂಪೂರ್ಣ ಹಕ್ಕುದಾರನಾಗಿ ಅನುಭವಿಸಿಕೊಂಡು ಬಂದು



Teachingninja.in

ಅವರು ದಿನಾಂಕ 23.07.2012ರಂದು ಮೃತಪಟ್ಟಿರುತ್ತಾರೆ. ಅವರ ಮರಣಾ ನಂತರ ಅವರ ವಾರಸುದಾರರಾದ ನಾವುಗಳು ನಿನ್ನ ಜೊತೆಯಾಗಿ ನಮ್ಮ ಹೆಸರುಗಳನ್ನು ಕಂದಾಯ ದಾಖಲೆಗಳಲ್ಲಿ ನೊಂದಾಯಿಸಿಕೊಂಡು ಷೆಡ್ಯೂಲ್ ಆಸ್ತಿಯನ್ನು ಸಂಪೂರ್ಣ ಹಕ್ಕಿನಿಂದ ಅನುಭವಿಸಿಕೊಂಡು ಬರುತ್ತಿದ್ದು ನಮಗೆ ಅದರಲ್ಲಿ ತಲಾ 1/3ನೇ ಅಂಶದ ಅವಿಭಕ್ತ ಹಕ್ಕು ಇರುತ್ತದೆ.

ಷೆಡ್ಯೂಲಿನಲ್ಲಿ ವಿವರಿಸಿದ ಸ್ಥಿರಾಸ್ತಿಯನ್ನು ನೀನು ಅಭಿವೃದ್ಧಿ ಪಡಿಸಿರುವುದರಿಂದ ಮತ್ತು ಅದನ್ನು ವಿಂಗಡಿಸಿಕೊಂಡಾಗಲಿ ಅಥವಾ ಜಂಟಿ ಹಕ್ಕಿನಿಂದ ಅಭಿವೃದ್ಧಿ ಪಡಿಸುವ ಯಾವುದೇ ಉದ್ದೇಶವನ್ನು ನಾವು ಹೊಂದಿಲ್ಲವಾದ್ದರಿಂದ ಷೆಡ್ಯೂಲ್ ಆಸ್ತಿಯ ಮೇಲೆ ನಾವು ಹೊಂದಿರುವ 2/3ನೇ ಅಂಶದ ಹಕ್ಕನ್ನು ಯಾವುದೇ ಪ್ರತಿಫಲ ಪಡೆಯದೇ ನಿನಗೆ ಹಕ್ಕು ಖುಲಾಸೆಯ ಮೂಲಕ ಬಿಟ್ಟುಕೊಟ್ಟಿರುತ್ತೇವೆ.

ಆದ್ದರಿಂದ ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿದ ಸ್ಥಿರಾಸ್ತಿಯಲ್ಲಿ ಈಗಾಗಲೇ ನೀನು ಹೊಂದಿದ 1/3ನೇ ಅಂಶದ ಹಕ್ಕಿನೊಂದಿಗೆ ಹಕ್ಕು ಬಿಟ್ಟುಕೊಟ್ಟವರಾದ ನಾವು ಈ ಮೂಲಕ ನಿನಗೆ ಬಿಟ್ಟುಕೊಟ್ಟ 2/3ನೇ ಅಂಶದ ಹಕ್ಕನ್ನೂ ಕೂಡ ಸೇರಿಸಿಕೊಂಡು ಸಂಪೂರ್ಣ ಹಕ್ಕುದಾರನಾಗಿ ಅನುಭವಿಸಿಕೊಂಡು ಬರುವರೆ ನೀನು ಹಕ್ಕುಳ್ಳವನಾಗಿರುತ್ತಿ. ಈಗಾಗಲೇ ಸಂಪೂರ್ಣ ನಿನ್ನ ಸ್ವಾಧೀನಾನುಭೋಗದಲ್ಲಿರುವ ಷೆಡ್ಯೂಲ್ ಆಸ್ತಿಯಲ್ಲಿ ನಮಗಿರುವ ಹಕ್ಕುಗಳನ್ನು ನಿನಗೆ ಖುಲಾಸೆ ಮಾಡಿ ನಮಗೆ ಇರುತ್ತಿದ್ದ ಯಾವತ್ತೂ ಹಕ್ಕು, ಸಂಬಂಧ ಮತ್ತು ಭಾದ್ಯತೆಗಳನ್ನು ನಾವು ಸಂಪೂರ್ಣವಾಗಿ ಕಳೆದುಕೊಂಡಿರುತ್ತೇವೆ.

ನೀನು ಷೆಡ್ಯೂಲ್ ಆಸ್ತಿಗೆ ಸಂಪೂರ್ಣ ಹಕ್ಕುದಾರನಾಗಿ ಖಾತೆ ವಾ ಪಹಣಿ ವಗೈರೆ ಕಂದಾಯ ದಾಖಲೆಗಳನ್ನು ನಿನ್ನ ಹೆಸರಲ್ಲಿ ತಬ್ದೀಲು ಪಡಿಸಿಕೊಂಡು ಅದರ ತೆರಿಗೆ ವಗೈರೆ ತೆತ್ತು ಸಂಪೂರ್ಣ ಇಚ್ಛಾನುಸಾರದ ಹಕ್ಕಿನಿಂದ ಅನುಭವಿಸಿ ಅದನ್ನು ಪರಭಾರೆ ಮಾಡುವರೇ ಸಂಪೂರ್ಣ ಹಕ್ಕುದಾರನಾಗಿರುತ್ತಿ. ಇನ್ನು ಮುಂದೆ ಷೆಡ್ಯೂಲ್ ಆಸ್ತಿಯಲ್ಲಿ ನಮಗಾಗಲಿ ಅಥವಾ ನಮ್ಮ ವಾರಸುದಾರರಿಗಾಗಲಿ ಯಾವುದೇ ರೂಪದ ಹಕ್ಕು, ಸಂಬಂಧ, ಭಾದ್ಯತೆ ವಗೈರೆ ಇರುವುದಿಲ್ಲ ಎಂದು ಬರೆದುಕೊಟ್ಟ ಅವಿಭಕ್ತ ಹಕ್ಕಿನ ಹಕ್ಕು ಖುಲಾಸೆ ಪತ್ರ.

## ಷೆ ಡ್ಯೂ ಲ್

ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ನಾವುಂದ ಗ್ರಾಮದ ಸರ್ವೆ ನಂ.195/1ರಲ್ಲಿ ಈ ಕೆಳಗಿನ ಚೆಕ್ಕುಬಂದಿಯೊಳಗೆ ಇರುವ 1 ಎಕರೆ ಜಮೀನು:

ಪೂರ್ವಕ್ಕೆ: ಸರ್ವೆ ನಂ.194 ರಲ್ಲಿ ನಾರಾಯಣ ಕೊಡ್ಗಿರವರ ಜಮೀನು

ಪಶ್ಚಿಮಕ್ಕೆ : ಸರ್ಕಾರಿ ರಸ್ತೆ



Teachingninja.in

ಉತ್ತರಕ್ಕೆ : ಸರ್ವೆ ನಂ.196 ರಲ್ಲಿ ರಮೇಶ ಖಾರ್ವಿರವರ ಜಮೀನು

ದಕ್ಷಿಣಕ್ಕೆ : ಸರ್ವೆ ನಂ.193 ರಲ್ಲಿ ಸುರೇಶ ಸುವರ್ಣರವರ ಮನೆ ಮತ್ತು ಬಾವಿ

ಈ ಮೇಲ್ಕಾಣಿಸಿದ ಸ್ಥಿರಾಸ್ತಿ ಮತ್ತು ಇದರಲ್ಲಿರುವ ಹಳೆಯ ಮನೆ ಮತ್ತು ಬಾವಿ ಮತ್ತು ಇದಕ್ಕೊಪಿದ ಮಾಮೂಲು ದಾರಿ ಹಕ್ಕು, ನೀರಿನ ಹಕ್ಕು ಮತ್ತು ಅನುಭೋಗದ ಹಕ್ಕು.

1.

2.

ಹಕ್ಕು ಪಡೆದುಕೊಂಡವರು

ಹಕ್ಕು ಖುಲಾಸೆ ಮಾಡಿದವರು

ಸಾಕ್ಷಿದಾರರು

1.

2.

*******



Teachingninja.in